

ನಾಗರಾಜನ ಗಂಟಲನ್ನು ಮಾತ್ರವಲ್ಲ, ಇಡೀ ಶರೀರವನ್ನೇ ದಹಿಸುತ್ತಿತ್ತು. ಉಳಿದುಕೊಂಡಿದ್ದು ಕಲೆ ಮಾತ್ರಾ ಅಂದುಕೊಂಡಿದ್ದು ಸುಳ್ಳು. ಮೇಲೆ ಮಾಯ್ದಂತೆ ಕಂಡರೂ ಒಳಗಿನ ಗಾಯ ಹಸಿ ಉಳಿಸಿಕೊಂಡಿದೆ. ನಾಗರಾಜ ಎರಡೂ ಕೈಗಳಿಂದ ತಲೆಗೂದಲನ್ನು ಜಗ್ಗಿಕೊಂಡ.

★★★

"ಏನೇ ಆಗ್ಲಿ, ಹತ್ತನೇ ದಿನ ಧರ್ಮೋದಕಕ್ಕೆ ಹೋಗಿಬರ್ತೀನಿ ಕಣೇ. ಎಷ್ಟಾದ್ರೂ ತಂಗಿ. ದೂರ ಮಾಡಿದ್ಲು ಅಂದಕೂಡ್ಲೆ ಋಣ ಕಡಿಯುತ್ತಾ? ಸಂಬಂಧ ಸಂಬಂಧಾನೇ..."

'ಮಕಕ್ಕೆ ಮಂಗಳಾರತಿ'ಯ ಮಾತಾಡಲಿಲ್ಲ ಸೀತೆ. ಈಗ ಅವನನ್ನು ತಡೆದರೆ ತನ್ನನ್ನೇ ತಾನು ಕ್ಷಮಿಸಿಕೊಳ್ಳಲಾರೆ ಎಂದು ಅವಳಿಗೂ ಅನಿಸಿಬಿಟ್ಟಿತ್ತು.

"ಅಲ್ರೀ, ಅಡ್ರೆಸ್ಸು ಗೊತ್ತಿಲ್ದೆ ಎಲ್ಲಿಗೇಂತ ಹೋಗ್ತೀರಿ? ಬೆಂಗಳೂರು ನಮ್ಮ ಹಳ್ಳಿ ಹಂಗೆ ಅಂದ್ಕೊಂಡ್ರಾ?"

"ಗೊತ್ತು ಕಣೇ. ಅಡ್ರೆಸ್ ಕಳ್ಕೊಂಡಿದೀನಿ ಅಂತ ಯಾರಹತ್ರಾದ್ರೂ ಇಸ್ಕೊಂಡ್ರಾಯ್ತು. ಕರ್ಮಾಂತರ ಎಲ್ಲಿ ಮಾಡ್ತಾರೆ ಅನ್ನೋ ಸುಳು ಕೂಡಾ ಸಿಗುತ್ತೆ..."

"ಹೋಗ್ಬನ್ನಿ..." ಅಂದಳು ಸೀತೆ.

★★★

ಹೊರಡುವ ಹೊತ್ತಲ್ಲಿ ಗಂಡನ ಕೈಗೆ ಕೈಚೀಲ ಕೊಡುತ್ತಾ ಹೇಳಿದಳು ಸೀತೆ,

"ಪಾಪ, ಆ ಮಗು ಇನ್ನೂ ಸಣ್ಣದು. ನಾಳೆ ಆ ಅಪ್ಪ ಇನ್ನೊಂದು ಮದುವೆ ಆದ್ರೆ ಅದರ ಗತಿ ಎಂತಾಗುತ್ತೋ ಏನೋ. ಎಷ್ಟು ಆಸೆ ಮಾಡಿ ಅಮೃತಾ ಮಗೂನ ಸಾಕ್ಕತಿದ್ಲೋ, ದೇವರಿಗೆ ಕಣ್ಣಿಲ್ಲ..."

"..."